ಒಳಚರಂಡಿ ಕಾಮಗಾರಿ

24(147); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರ)

ಅ) ಹಿರೇಕೆರೂರು ನಗರದ ಒಳಚರಂಡಿ ಕಾಮಗಾರಿ ಯೋಜನೆಯು ಸರ್ಕಾರದ ಮುಂದಿದೆಯೇ;

ಆ) ಯಾವಾಗ ಕಾಮಗಾರಿ ಪ್ರಾರಂಭಿಸಲಾಗುವುದು?

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಹಿರೇಕೆರೂರು ನಗರದ ಒಳಚರಂಡಿ ಯೋಜನೆಗೆ ಸರ್ಕಾರದ ಆದೇಶ ಸಂ. ನಅಇ/06/ಯುಡಿಎಸ್/2011, ಬೆಂಗಳೂರು, ದಿನಾಂಕ: 17–11–2011ರಲ್ಲಿ ₹ 827.13 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಆ) ಗ್ರಾಮಸಾರ ಶುದ್ದೀಕರಣ ಘಟಕ ನಿರ್ಮಾಣಕ್ಕೆ ಸ್ಥಳೀಯ ಸಂಸ್ಥೆ ನೀಡಿರುವ ಭೂಮಿಯ ತಕರಾರು ಜೆ.ಎಂ.ಎಫ್.ಸಿ. ನ್ಯಾಯಾಲಯದಿಂದ ದಿನಾಂಕ: 12–07–2013ರಲ್ಲಿ ತೀರ್ಮಾನವಾಗಿರುತ್ತದೆ. ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಲು ಕ್ರಮ ಕೈಗೊಂಡು ಶೀಘ್ರವಾಗಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗುವುದು. ಸದರಿ ಕಾಮಗಾರಿಯನ್ನು 2 ವರ್ಷಗಳಲ್ಲಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಕಾಗವಾಡ–ಕಲಾದಗಿ ರಾಜ್ಯ ಹೆದ್ದಾರಿ 53ರ 15.1ರ ಸೇತುವೆ ನಿರ್ಮಾಣ

25(122); ಶ್ರೀ ಭರಮಗೌಡ (ರಾಜು) ಹಾಲಗೌಡ ಕಾಗೆ (ಕಾಗವಾಡ)

ಅ) ಕಾಗವಾಡ–ಕಲಾದಗಿ ರಾಜ್ಯ ಹೆದ್ದಾರಿ–53 ರ ಕಿ.ಮೀ. 15.1 ರಲ್ಲಿ (ಉಗಾರಖುರ್ದ) ನದಿಯು ಹರಿಯುತ್ತಿದ್ದು, ಮಳೆಗಾಲದಲ್ಲಿ ಸಂಪೂರ್ಣವಾಗಿ ರಸ್ತೆ ಮುಳುಗಡೆಯಾಗಿ ಸಂಚಾರ ಸ್ಥಗಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;